**ಸಿ ಸಿ 934/2022 ಪಿಡಬ್ಲ್ಯೂ.1**

**ಸಾಕ್ಷಿಯನ್ನು ದಿನಾಂಕ 07.04.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಎಂ ಎಂ ವಕೀಲರಿಂದಃ**

2021-22 ಕೋವಿಡ್ ಇತ್ತು ಎಂದರೆ ಸರಿ. ನಾನು ಆಗ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಅಲ್ಲಿ ತುಂಬಾ ಜನರು ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಕೋವಿಡ್ ಕಾರಣದಿಂದ ಕಂಪನಿ ಮುಚ್ಚಿ ಹೋಯಿತು ಎಂದರೆ ಸರಿ. ಆರೋಪಿಗೆ ನೀಡಿದ ಹಣಕ್ಕೆ ಆದಾಯ ತೆರಿಗೆಯನ್ನು ನಾನು ಪಾವತಿಸಿಲ್ಲ. ಆರೋಪಿಗೆ ನಾನು ರೂ. 3 ಲಕ್ಷ ಹಣ ನೀಡಿದ ದಿನದ ಬ್ಯಾಂಕ್ ಸ್ಟೇಟ್ ಮೆಂಟ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಚೆಕ್ ಮೇಲಿನ ಬರವಣಿಗೆಯನ್ನು ನಾನು ಬೇರೆಯವರಿಂದ ಬರೆಸಿದ್ದೇನೆ ಎಂದರೆ ಸರಿಯಲ್ಲ, ಆರೋಪಿಯೇ ಬರೆದಿದ್ದಾರೆ.

ನಾನು ಮತ್ತು ಆರೋಪಿ ರಾಜಿ ಮಾಡಿಕೊಂಡಿದ್ದೆವು ಎಂದರೆ ಸರಿ. ರೂ. 1,20,000/- ಕ್ಕೆ ರಕಾಜಿ ಮಾಡಿಕೊಂಡಿದ್ದೆವು ಎಂದರೆ ಸರಿ. ರಾಜಿ ಮಾಡಿಕೊಂಡ ದಿನವೇ ರೂ. 20,000/- ಹಣವನ್ನು ಆರೋಪಿಯಿಂದ ಪಡೆದುಕೊಂಡೆ ಎಂದರೆ ಸರಿ. ಆ ಸಂಬಂಧ ನ್ಯಾಯಾಲಯದಲ್ಲಿಯೇ ಸಹಿ ಮಾಡಿದ್ದೇನೆ ಎಂದರೆ ಸರಿ. ನನ್ನನ್ನು ಪಾಟೀ ಸವಾಲು ಮಾಡಲು ಆರೋಪಿಯು ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿ. ಆ ಅರ್ಜಿಗೆ ತಕರಾರು ಸಲ್ಲಿಸಿದ್ದೇವೆ ಎಂದರೆ ಸರಿ. ಆ ತಕರಾರಿನಲ್ಲಿಯೂ ಸಹ ರೂ. 1, 20,000/- ಕ್ಕೆ ರಾಜಿ ಮಾಡಿಕೊಂಡಿದ್ದಾರೆ ಎಂದು ಹೇಳಲಾಗಿದೆ ಎಂದರೆ ಸರಿ.

ನಾನು ಆರೋಪಿಗೆ ರೂ. 30,000/- ಬೆಲೆ ಬಾಳುವ ಮೊಬೈಲ್ ಪೋನನ್ನು ಕೊಡಿಸಿದ್ದೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ಸರ್ಕಾರಿ ನೌಕರರು ಎಂದರೆ ಸರಿಯಲ್ಲ. ನಾನು ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವಾಗ ತುಂಬಾ ಜನರು ನನ್ನಿಂದ ಬಡ್ಡಿಗೆ ಹಣ ಪಡೆದುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಬಡ್ಡಿ ನೆಪದಲ್ಲಿ ಎ ಟಿ ಎಂ

ಕಾರ್ಡ ಇತ್ಯಾದಿ ತೆಗೆದುಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ.

ಈಗ ನಾನು ವ್ಯವಸಾಯ ಮಾಡುತ್ತೇನೆ. ನಾನು ವರ್ಷಕ್ಕೆ 2 ಲಕ್ಷ ಸಂಪಾದನೆ ಮಾಡುತ್ತೇನೆ. ಆ ರೂ.2 ಲಕ್ಷ ವ್ಯವಹಾರ ಮಾಡುವ ಸಂಬಂಧ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ಆರೋಪಿ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿದೆ. ಆರೋಪಿ ನನಗೆ ಯಾವುದೇ ಹಣ ನೀಡಬೇಕಾಗಿಲ್ಲ ಎಂದರೆ ಸರಿಯಲ್ಲ. ಆರೋಪಿ ನೀಡಿರುವ ಚೆಕ್ಕಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚೆಕ್ಕಿನಲ್ಲಿರುವ ದಿನಾಂಕಕ್ಕೂ ಪಾಟೀ ಸವಾಲಿನಲ್ಲಿ ಹೇಳುತ್ತಿರುವ ದಿನಾಂಕಕ್ಕೂ ವ್ಯಾತ್ಯಾಸ ಇದೆ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯೊಂದಿಗೆ ರೂ.1,20,000/- ರಾಜಿ ಮಾಡಿಕೊಂಡಿರುವ ಕಾರಣ ಆರೋಪಿಯು ನನಗೆ ರೂ. 3,00,000/- ನೀಡುವಂತಿಲ್ಲ ಎಂದರೆ ಸರಿಯಲ್ಲ. ರಾಜಿ ಮಾಡಿಕೊಂಡ ದಿನ ಉಳಿಕೆ ರೂ.1,00,000/- ಪ್ರಕರಣ ಮುಕ್ತಾಯಗೊಳಿಸುವುದಾಗಿ ರಾಜಿ ಮಾಡಿಕೊಂಡಿದ್ದೆವು ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**